ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1196
ಸದಸ್ಯರ ಹೆಸರು	:	ಶ್ರೀ ಕೆ.ಎ.ತಿಪ್ಪೇಸ್ವಾಮಿ, (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	22.09.2021.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಸರ್ಕಾರ ರಾಷ್ಟ್ರೀಯ ಹೆದ್ದಾರಿ 75 ರಲ್ಲಿರುವ ಶಿರಾಡಿ ಘಾಟ್‌ನಲ್ಲಿ 23.61 ಕಿಮೀ ಉದ್ದ ಬೈಪಾಸ್ ರಸ್ತೆ ನಿರ್ಮಿಸಲು ಅಧ್ಯಯನ ನಡೆಸಿದೆಯೇ: ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು.	ರಾಷ್ಟ್ರೀಯ ಹೆದ್ದಾರಿ 75 ರಲ್ಲಿರುವ ಶಿರಾಡಿ ಘಾಟ್‌ನಲ್ಲಿ 23.61 ಕಿಮೀ ಉದ್ದ ಬೈಪಾಸ್ ರಸ್ತೆ ನಿರ್ಮಿಸಲು ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗುತ್ತಿದ್ದು, ಸದರಿ ಕಾಮಗಾರಿಯ ಬಗ್ಗೆ ಈ ಕೆಳಗಿನಂತೆ ವರದಿಸಿರುತ್ತಾರೆ. ಕಾರ್ಯಸಾಧ್ಯತೆ ಮತ್ತು ಭೂ-ತಾಂತ್ರಿಕ ಕಾಮಗಾರಿಗೆ ಸಮಾಲೋಚಕರ ಸೇವೆಯನ್ನು ಶಿರಾಡಿಘಾಟ್ ರಾಷ್ಟ್ರೀಯ ಹೆದ್ದಾರಿ – 75 ರಸ್ತೆ ಕಿಮೀ 238.00 ದಿಂದ 261.45 ಕಿಮೀ ವರೆಗಿನ ಬೈಪಾಸ್ ರಸ್ತೆ ಕಾಮಗಾರಿ ನಿರ್ಮಿಸಲು ಪ್ರಾರಂಭಿಕವಾಗಿ PWD ರವರು DPR ಅನ್ನು ಪ್ರಾರಂಭಿಸಿದ್ದು, ನಂತರ ದಿನಾಂಕ:24.04.2018 ರಂದು ಭಾರತೀಯ ರಾಷ್ಟ್ರೀಯ ಪ್ರಾಧಿಕಾರದ (NHAI), PWD ಮತ್ತು ಸಮಾಲೋಚಕರೊಂದಿಗೆ ತ್ರಿಪಕ್ಷೀಯ ಕರಾರು ಮಾಡಿಕೊಂಡು DPR ಅನ್ನು ತಯಾರಿಸಲು NHAI ಇವರಿಗೆ ಹಸ್ತಾಂತರಿಸಲಾಗಿರುತ್ತದೆ. ಸದರಿ ಯೋಜನೆಗೆ ಪರಿಸರ ಇಲಾಖೆಯ ವತಿಯಿಂದ ಅನುಮತಿ ಪಡೆಯಲು ನೇಮಿಸಲಾಗಿರುವ ಸಮಾಲೋಚಕರು ಅಸಾಮರ್ಥ್ಯವನ್ನು ವ್ಯಕ್ತಪಡಿಸಿರುವುದರಿಂದ ರಾಜ್ಯದ ಪರಿಸರ ಇಲಾಖೆಯ ವತಿಯಿಂದ ಮತ್ತು ಕೇಂದ್ರ ಪರಿಸರ ಮಂತ್ರಾಲಯದ ವತಿಯಿಂದ ಅನುಮತಿಯನ್ನು ಇದುವರೆವಿಗೂ ಪಡೆದಿರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, (NHAI) ರವರು ವರದಿಸಿರುತ್ತಾರೆ.
ಆ)	ರಾಜ್ಯ ಸರ್ಕಾರ ಈ ಬೈಪಾಸ್ ನಿರ್ಮಾಣವನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದೆಯೇ: ಹಾಗಿದ್ದಲ್ಲಿ ಈ ಬೈಪಾಸ್ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ. ಈ ಕಾಮಗಾರಿಗೆ ಅಗತ್ಯವಿರುವ ರಾಜ್ಯದ ಪರಿಸರ ಇಲಾಖೆ ಮತ್ತು ಕೇಂದ್ರ ಪರಿಸರ ಮಂತ್ರಾಲಯದ ಅನುಮತಿ ಪಡೆಯಲಾಗಿದೆಯೇ (ಪೂರ್ಣ ವಿವರ ನೀಡುವುದು)	
ಇ)	ಈ ಕಾಮಗಾರಿಯ ಒಟ್ಟು ಅಂದಾಜು ಮೊತ್ತವೆಷ್ಟು: ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಮುಂದೆ ಇರುವ ಮುಖ್ಯ ಸವಾಲುಗಳು ಯಾವುವು: ಈ ಸವಾಲುಗಳನ್ನು ಬಗೆಹರಿಸಲು ತಯಾರಿಸಿರುವ ಕ್ರಿಯಾಶೀಲ ಯೋಜನೆ ಯಾವುದುಃ (ಪೂರ್ಣ ಮಾಹಿತಿ ನೀಡುವುದು)	ಈ ಕಾಮಗಾರಿಯ ಅಂದಾಜು ಮೊತ್ತ ರೂ.10145.62 ಕೋಟಿಗಳು. ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಮುಂದೆ ಇರುವ ಮುಖ್ಯ ಸವಾಲುಗಳು, ಅಂದರೆ 1. ಭೂಸ್ವಾಧೀನ ಸಮಸ್ಯೆಗಳು 2. ಯೋಜನೆಯಲ್ಲಿನ ವಿವಿಧ ಇಲಾಖೆಗಳ ಅನುಮತಿಗಳು ಅ) ಅರಣ್ಯ ಇಲಾಖೆಯ ಅನುಮತಿ ಆ) ರೈಲ್ವೆ ಇಲಾಖೆಯ ಅನುಮತಿ

...2

		ಇ) ಸದರಿ ಯೋಜನೆಯು ದಟ್ಟ ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ಇದರಿಂದಾಗಿ ಪರಿಸರ ಹಾಗೂ ಅರಣ್ಯ ಇಲಾಖೆಯ ಅನುಮತಿ ಪಡೆಯುವುದು ಮುಖ್ಯ ಸವಾಲಾಗಿದೆ. ಅಲ್ಲದೆ ಕಾಮಗಾರಿಯ ವೆಚ್ಚ ಅಧಿಕವಾಗಿರುತ್ತದೆ. ಪರಿಸರ, ಅರಣ್ಯ ಮತ್ತು ರೈಲ್ವೆ ಇಲಾಖೆಗಳಿಂದ ಅನುಮತಿ ಪಡೆಯುವ ಕುರಿತು ಪರಿಶೀಲಿಸಲಾಗಿದ್ದು, ಸಮಾಲೋಚಕರು ಸದರಿ ವಿಷಯದ ಕುರಿತು ಅಸಾಮರ್ಥ್ಯವನ್ನು ವ್ಯಕ್ತಪಡಿಸಿರುವುದರಿಂದ, ಸದರಿ ಸಮಾಲೋಚಕರ ಸೇವೆಯನ್ನು ಮುಕ್ತಾಯಗೊಳಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು ಹಾಗೂ ಹೊಸ ಸಮಾಲೋಚಕರನ್ನು ನೇಮಿಸಿಕೊಳ್ಳಲಾಗುವುದೆಂದು (NHAI) ರವರು ವರದಿಸಿರುತ್ತಾರೆ.
ಈ)	ಬೈಪಾಸ್ ನಿರ್ಮಾಣವನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಿಂದ ಹಿಂಪಡೆದು ರಾಜ್ಯ ಸರ್ಕಾರವೇ ನಿರ್ಮಿಸಿದಲ್ಲಿ, ಈ ಮೂಲ ಸೌಕರ್ಯ ಕಲ್ಪಿಸಲು ವೆಚ್ಚ ಮಾಡಲಾದ ಹಣವನ್ನು ರಸ್ತೆ ಸುಂಕದಿಂದ ವಾಪಸ್ ಪಡೆಯುವುದಲ್ಲದೆ, ಈ ಮೂಲದಿಂದ ಬರುವ ಆದಾಯವನ್ನು ಬೇರೆ ಹೆದ್ದಾರಿಗಳ ಅಭಿವೃದ್ಧಿಗೆ ತೊಡಗಿಸಬಹುದು ಎನ್ನುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಈ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವೇನು: (ಪೂರ್ಣ ಮಾಹಿತಿ ನೀಡುವುದು)	ಬೈಪಾಸ್ ನಿರ್ಮಾಣವನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಿಂದ ಹಿಂಪಡೆದು ರಾಜ್ಯ ಸರ್ಕಾರದ ವತಿಯಿಂದ ನಿರ್ಮಿಸುವ ಪ್ರಸ್ತಾವನೆಯು ಸಧ್ಯ ಇರುವುದಿಲ್ಲ.

ಕಡತ ಸಂಖ್ಯೆ: ಲೋಇ 240 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು